# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬
ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ
ಕರ್ನಾಟಕ ರಾಜ್ಯ, ಭಾರತ


## ಅಧಿಸೂಚನೆ (ಕರಡು ಪ್ರತಿ)

೦೨, ಏಪ್ರಿಲ್, ೨೦೨೫

## ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. (ಡಾಕ್ಟರ್ ಆಫ್ ಫಿಲಾಸಫಿ ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳು) ಪದವಿ ನಿಯಮಾವಳಿ-೨೦೨೨

**ಪೀಠಿಕೆ:**

ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಯುಜಿಸಿ (ಪಿಎಚ್‌ಡಿ, ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳ) ನಿಯಮಾವಳಿ ೨೦೨೨ ಅನ್ನು ಭಾರತದ ಗೆಜೆಟ್‌ನಲ್ಲಿ ನವೆಂಬರ್ ೭, ೨೦೨೨ ರಂದು ವಿಶೇಷ ಅಧಿಸೂಚನೆಯಾಗಿ ಪ್ರಕಟಿಸಿದೆ. ಈ ಯುಜಿಸಿ ನಿಯಮಾವಳಿಗಳ ವಿಭಾಗ ೧.೨ರ ಅನ್ವಯ ಕೇಂದ್ರ ಕಾಯಿದೆ ಅಥವಾ ರಾಜ್ಯ ಕಾಯಿದೆಯ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ಸಂಯೋಜಿಸಲ್ಪಟ್ಟ ಪ್ರತಿಯೊಂದು ವಿಶ್ವವಿದ್ಯಾಲಯ, ಅಂಗಸಂಸ್ಥೆ, ಕಾಲೇಜು ಮತ್ತು ಯುಜಿಸಿ ಕಾಯಿದೆ ೧೯೫೬ರ ಸೆಕ್ಷನ್ ೩ರ ಅಡಿಯಲ್ಲಿ ವಿಶ್ವವಿದ್ಯಾಲಯವೆಂದು ಪರಿಗಣಿಸಲಾದ ಪ್ರತಿಯೊಂದು ಸಂಸ್ಥೆಗೂ ಅನ್ವಯಿಸುತ್ತದೆ.

ಕನ್ನಡ ವಿಶ್ವವಿದ್ಯಾಲಯವನ್ನು ಕರ್ನಾಟಕ ಸರ್ಕಾರವು ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧ ಸಂಖ್ಯೆ ೨೩ರ ಮೂಲಕ ಸ್ಥಾಪಿಸಲಾಗಿದೆ. ಆದ್ದರಿಂದ, ಯುಜಿಸಿ (ಪಿಎಚ್‌ಡಿ, ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳ) ನಿಯಮ ೨೦೨೨ರ ಅನುಸಾರ ಮತ್ತು ಡಿಸೆಂಬರ್, ೨೦೧೯ರ ಯುಜಿಸಿ ಡಿ.ಒ. ಪತ್ರ ಸಂಖ್ಯೆ: ಎಫ್.೧-೨/೨೦೧೮ (ಜರ್ನಲ್/ಕೇರ್) ಅನ್ನು ಸೇರಿಸುವ ಮೂಲಕ ಮತ್ತು ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧ರ ಸೆಕ್ಷನ್ ೨೩ರೊಂದಿಗೆ ಓದಲಾದ ಸೆಕ್ಷನ್ ೨೦ (ಎ)ರಲ್ಲಿ ನೀಡಲಾದ ಅಧಿಕಾರಗಳ ಪ್ರಕಾರ, ಈ ನಿಯಮಗಳನ್ನು ಮಾಡಲು ಶೈಕ್ಷಣಿಕ ಮಂಡಳಿಗೆ ಅಧಿಕಾರ ನೀಡಲಾಗಿದೆ.

**೧. ಶೀರ್ಷಿಕೆ ಮತ್ತು ಆರಂಭ:**

(೧). ಈ ನಿಯಮಗಳನ್ನು "ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. (ಡಾಕ್ಟರ್ ಆಫ್ ಫಿಲಾಸಫಿ ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳು) ಪದವಿ ನಿಯಮಾವಳಿ -೨೦೨೨" ಎಂದು ಕರೆಯತಕ್ಕದು.

(೨). ಈ ನಿಯಮ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದಡಿ ರಚನೆಯಾದ ಅಧ್ಯಯನ ವಿಭಾಗಗಳು, ವಿಸ್ತರಣಾ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳಿಗೆ ಅನ್ವಯಿಸುತ್ತದೆ.

(೩). ಈ ನಿಯಮಾವಳಿ ಶೈಕ್ಷಣಿಕ ಮಂಡಳಿ, ಕಾರ್ಯಕಾರಿ ಸಮಿತಿ ಶಿಫಾರಸ್ಸಿನ ದಿನಾಂಕದಿಂದ ಜಾರಿಗೆ ಬರುತ್ತದೆ ಮತ್ತು ಕುಲಾಧಿಪತಿಗಳು ಅನುಮೋದಿಸುತ್ತಾರೆ.

2/4/25



Scanned with OKEN Scanner

(೪). ಪಿಎಚ್.ಡಿ ಪದವಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯುಜಿಸಿ/ ರಾಜ್ಯ ಸರ್ಕಾರ/ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನಿಂದ ಕಾಲಕಾಲಕ್ಕೆ ಹೊರಡಿಸಲಾದ ನಿಯಮಗಳು/ ಆದೇಶಗಳು/ ಸುತ್ತೋಲೆಗಳು/ ಸೂಚನೆಗಳು ಇತ್ಯಾದಿಗಳನ್ನು ಸೇರಿಸಲು ಸಹ ಅವಕಾಶವನ್ನು ಮಾಡಲಾಗಿದೆ.

೨. ಪರಿಭಾಷೆಗಳ ವ್ಯಾಖ್ಯಾನ – ವಿವರಣೆ:

(೧) ಈ ನಿಯಮಗಳಲ್ಲಿ, ಯಾವುದೇ ಸಂದರ್ಭವು ಬೇರೆ ರೀತಿಯಲ್ಲಿ ಅಗತ್ಯಪಡಿಸದ ಹೊರತು ಕೆಳಗಿನಂತೆ ಪರಿಭಾಷೆಗಳನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸಲಾಗಿದೆ;

ಎ) "ಆಕ್ಟ್" ಎಂದರೆ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧ರ ಸಂಖ್ಯೆ ೨೩;

ಬಿ)."ಅಡ್ಜಂಕ್ಟ್ ಫ್ಯಾಕಲ್ಟಿ" ಎಂದರೆ ಅರೆಕಾಲಿಕ ಅಥವಾ ತಾತ್ಕಾಲಿಕ ಬೋಧಕ, ಆದರೆ ವಿಶ್ವವಿದ್ಯಾಲಯದಿಂದ ಬೋಧಿಸಲು ನೇಮಕಗೊಂಡ ಅಧ್ಯಯನ ವಿಭಾಗದ ಪೂರ್ಣಕಾಲಿಕ ಬೋಧಕ ಸದಸ್ಯರಲ್ಲ;

ಸಿ)."ಕ್ಯುಮುಲೇಟಿವ್ ಗ್ರೇಡ್ ಪಾಯಿಂಟ್ ಆವರೇಜ್ (ಸಿಜಿಪಿಎ)" ಎಂದರೆ ವಿದ್ಯಾರ್ಥಿ ಎಲ್ಲಾ ಸೆಮಿಸ್ಟರ್‌ಗಳಲ್ಲಿ ಒಟ್ಟಾರೆ ಸಂಚಿತ ಕಾರ್ಯಕ್ಷಮತೆಯ ಅಳತೆ. ಸಿಜಿಪಿಎ ಎನ್ನುವುದು ಎಲ್ಲಾ ಸೆಮಿಸ್ಟರ್‌ಗಳ ವಿವಿಧ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಯು ಪಡೆದ ಒಟ್ಟು ಗುಣಾಂಕಗಳ ಅನುಪಾತ ಮತ್ತು ಎಲ್ಲಾ ಸೆಮಿಸ್ಟರ್‌ಗಳಲ್ಲಿನ ಎಲ್ಲಾ ಕೋರ್ಸ್‌ಗಳ ಒಟ್ಟು ಗುಣಾಂಕಗಳ ಮೊತ್ತವಾಗಿದೆ. ಇದನ್ನು ಎರಡು ದಶಾಂಶದ ಸ್ಥಳದಲ್ಲಿ ತೋರಿಸಲಾಗುತ್ತದೆ;

ಡಿ) "ಕ್ರೆಡಿಟ್" ಎಂದರೆ ಕೋರ್ಸ್ ಕೆಲಸದ ಅವಧಿಯಲ್ಲಿ ವಾರಕ್ಕೆ ಅಗತ್ಯವಿರುವ ಬೋಧನಾ ಗಂಟೆಗಳ ಸಂಖ್ಯೆ. ನಾಲ್ಕು ಕ್ರೆಡಿಟ್ ಕೋರ್ಸ್‌ಗೆ ವಾರಕ್ಕೆ ನಾಲ್ಕು ಗಂಟೆ ಉಪನ್ಯಾಸಗಳನ್ನು ನೀಡುವ, ಪ್ರತಿ ಒಂದು ಗಂಟೆ ಉಪನ್ಯಾಸವನ್ನು ಒಂದು ಕ್ರೆಡಿಟ್ ಎಂದು ಪರಿಗಣಿಸಲಾಗುತ್ತದೆ;

ಇ) "ಕೇಂದ್ರ" ಎಂದರೆ ವಿಶ್ವವಿದ್ಯಾಲಯವು ಘಟಕವಾಗಿ ಸ್ಥಾಪಿಸಿದ ಅಥವಾ ಅದರೊಂದಿಗೆ ಮಾನ್ಯತೆ ಪಡೆದ ಉನ್ನತ ಶಿಕ್ಷಣ ಸಂಸ್ಥೆ ಅಥವಾ ಸಂಶೋಧನೆಯಲ್ಲಿ ತೊಡಗಿರುವ ಸಂಸ್ಥೆ;

ಎಫ್) "ಆಯೋಗ" ಎಂದರೆ ೧೯೫೬ರ ಯುಜಿಸಿ ಕಾಯ್ದೆಯ ಸೆಕ್ಷನ್ ೪ ರ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯ ಧನಸಹಾಯ ಆಯೋಗ;

ಜಿ) "ಕೋರ್ಸ್" ಎಂದರೆ ಅಧ್ಯಯನದ ಕಾರ್ಯಕ್ರಮವನ್ನು ಒಳಗೊಂಡಿರುವ ನಿರ್ದಿಷ್ಟ ಘಟಕಗಳನ್ನು ಹೊಂದಿರುವ ಒಂದು ಪಠ್ಯಕ್ರಮ;

ಎಚ್.) "ಕೋರ್ಸ್‌ವರ್ಕ್" ಎಂದರೆ ಪಿಎಚ್.ಡಿಗೆ ನೋಂದಾಯಿಸಿದ ವಿದ್ಯಾರ್ಥಿಗಳಿಗೆ ಅಧ್ಯಯನ ವಿಭಾಗ/ಕೇಂದ್ರದಿಂದ ಸೂಚಿಸಲಾದ ಪಿಎಚ್.ಡಿ ಅಧ್ಯಯನದ ಕೋರ್ಸ್‌ಗಳು;

ಐ) "ಪದವಿ" "ಎಂದರೆ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧ ರ ಸೆಕ್ಷನ್ ೨೩ (೫) ರಲ್ಲಿ ಅವಕಾಶ ಕಲ್ಪಿಸಿದ ನಿಬಂಧನೆಗಳಿಗೆ ಅನುಗುಣವಾಗಿ ಮತ್ತು ದಿ.೨೩.೦೮.೨೦೦೪ರ ಪಿಎಚ್.ಡಿ ಅನುಶಾಸನದಂತೆ ವಿಶ್ವವಿದ್ಯಾಲಯವು ನೀಡುವ ಪದವಿ;



Scanned with OKEN Scanner

ಜೆ) "ಬಾಹ್ಯ ಮೌಲ್ಯಮಾಪಕ" "ಎಂದರೆ ಪಿಎಚ್.ಡಿ. ಕಾರ್ಯಕ್ರಮಕ್ಕೆ ವಿದ್ಯಾರ್ಥಿ ನೋಂದಾಯಿಸಿರುವ ವಿಶ್ವವಿದ್ಯಾಲಯದ ಭಾಗವಾಗಿರದ ಸಂಶೋಧನಾ ಪ್ರಕಟಣೆಗಳನ್ನು ಹೊಂದಿರುವ ವಿಷಯ ತಜ್ಞ;

ಕೆ) ವಿದೇಶಿ ಶೈಕ್ಷಣಿಕ ಸಂಸ್ಥೆ "ಎಂದರೆ-(೧) ತನ್ನ ದೇಶದಲ್ಲಿ ನಿಯಮಾನುಸಾರ ಸ್ಥಾಪಿತವಾದ ಅಥವಾ ಸಂಘಟಿತವಾದ ಮತ್ತು ತನ್ನ ದೇಶದಲ್ಲಿ ಪದವಿಪೂರ್ವ, ಸ್ನಾತಕೋತ್ತರ ಮತ್ತು ಉನ್ನತ ಮಟ್ಟದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೀಡುವ ಸಂಸ್ಥೆ ಮತ್ತು (೨) ಸಾಂಪ್ರದಾಯಿಕ ಮುಖಾಮುಖಿ ವಿಧಾನದ ಮೂಲಕ ಪದವಿ ಪ್ರದಾನಕ್ಕೆ ಕಾರಣವಾಗುವ ಅಧ್ಯಯನದ ಕಾರ್ಯಕ್ರಮಗಳನ್ನು ನೀಡುವ ಸಂಸ್ಥೆ, ಆದರೆ ದೂರಶಿಕ್ಷಣ, ಆನ್‌ಲೈನ್, ಒಡಿಎಲ್ ವಿಧಾನವನ್ನು ಹೊರತಾಗಿರುವಂತಹದ್ದು;

ಎಲ್) "ಗ್ರೇಡ್ ಪಾಯಿಂಟ್" ಎಂದರೆ ೧೦ ಪಾಯಿಂಟ್ ಶ್ರೇಣಿ, ಪ್ರತಿ ಅಕ್ಷರದ ದರ್ಜೆಗೆ ನಿಗದಿಪಡಿಸಿದ ಸಂಖ್ಯಾತ್ಮಕ ಮೌಲ್ಯ;

ಎಂ) "ಮಾರ್ಗದರ್ಶಕರು /ಸಂಶೋಧನಾ ಮೇಲ್ವಿಚಾರಕರು" ಎಂದರೆ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಮಾರ್ಗದರ್ಶಕ, ಪಿಎಚ್.ಡಿ. ವಿದ್ಯಾರ್ಥಿಯ ಸಂಶೋಧನೆಯ ಮೇಲ್ವಿಚಾರಣೆಗೆ ನಿಗದಿಪಡಿಸಿದ ಮೇಲ್ವಿಚಾರಕ.

ಎನ್) "ಉನ್ನತ ಶಿಕ್ಷಣ ಸಂಸ್ಥೆ" ಎಂದರೆ ಈ ನಿಯಮಗಳ ಸೆಕ್ಷನ್ ೧ರ ಷರತ್ತು ೨ ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯ ಅಥವಾ ಸಂಸ್ಥೆ;

ಓ) "ಅಂತರಶಿಸ್ತೀಯ ಅಧ್ಯಯನ" "ಎಂದರೆ ಪಿಎಚ್.ಡಿ ವಿದ್ಯಾರ್ಥಿ ಎರಡು ಅಥವಾ ಹೆಚ್ಚಿನ ಶೈಕ್ಷಣಿಕ ವಿಭಾಗಗಳಲ್ಲಿ ನಡೆಸುವ ಸಂಶೋಧನೆ;"

ಪಿ) ಮುಕ್ತ ಮತ್ತು ದೂರಶಿಕ್ಷಣ ಕಲಿಕೆ ವಿಧಾನ ಎಂದರೆ ಯುಜಿಸಿ (ಮುಕ್ತ ಮತ್ತು ದೂರಶಿಕ್ಷಣ ಕಾರ್ಯಕ್ರಮಗಳು ಮತ್ತು ಆನ್‌ಲೈನ್ ಕಾರ್ಯಕ್ರಮಗಳು) ನಿಯಮಗಳು ೨೦೨೦ರ ಅಡಿಯಲ್ಲಿ ವ್ಯಾಖ್ಯಾನಿಸಿದಂತೆ ಅರ್ಥವನ್ನು ಹೊಂದಿರುವಂತಹದ್ದು;

ಕ್ಯೂ) "ಆನ್‌ಲೈನ್ ಮೋಡ್" ಎಂದರೆ ಯುಜಿಸಿ (ಮುಕ್ತ ಮತ್ತು ದೂರಶಿಕ್ಷಣ ಕಾರ್ಯಕ್ರಮಗಳು ಮತ್ತು ಆನ್‌ಲೈನ್ ಕಾರ್ಯಕ್ರಮಗಳು) ನಿಯಮಗಳು ೨೦೨೦ರ ಅಡಿಯಲ್ಲಿ ವ್ಯಾಖ್ಯಾನಿಸಿದ ಅರ್ಥವನ್ನು ಹೊಂದಿರುವಂತಹದ್ದು;

ಆರ್). "ಕೃತಿಚೌರ್ಯ" ಎಂದರೆ ಬೇರೊಬ್ಬರ ಕೃತಿ ಅಥವಾ ಬರವಣಿಗೆಯನ್ನು ತೆಗೆದುಕೊಂಡು ಅವುಗಳನ್ನು ತನ್ನದೆಂದು ಬಳಸಿಕೊಳ್ಳುವ ಕ್ರಮ;

ಎಸ್) "ಕಾರ್ಯಕ್ರಮ" ಎಂದರೆ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧ರ ಸೆಕ್ಷನ್ ೨೩ರ ಪ್ರಕರಣ (೫)ರ ಅಡಿಯಲ್ಲಿ ವಿಶ್ವವಿದ್ಯಾಲಯವು ನಿರ್ದಿಷ್ಟಪಡಿಸಿದ ಪದವಿಗಾಗಿ ಅನುಸರಿಸುವ ವಿಶ್ವವಿದ್ಯಾಲಯದ ಕಾರ್ಯಕ್ರಮ;

ಟಿ). "ಕೈಪಿಡಿ" ಎಂದರೆ, ಕನ್ನಡ ವಿಶ್ವವಿದ್ಯಾಲಯವು, ವಿಶ್ವವಿದ್ಯಾಲಯ ಮತ್ತು ಈ ಕಾರ್ಯಕ್ರಮಗಳಿಗೆ ಸಂಬಂಧಿಸಿದ ನ್ಯಾಯಯುತ ಮತ್ತು ಪಾರದರ್ಶಕ ಮಾಹಿತಿಯನ್ನು ಸಾರ್ವಜನಿಕರಿಗೆ (ಅಂತಹ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ಬಯಸುವವರು



Scanned with OKEN Scanner

ಸೇರಿದಂತೆ) ಒದಗಿಸಲು ಮುದ್ರಿತವಾಗಿರಲಿ ಅಥವಾ ಇತರ ರೂಪದಲ್ಲಿ ಪ್ರಕಟಿಸಿದ ಯಾವುದೇ ದಾಖಲೆ;

ಯು)"ಸಂಶೋಧನಾ ಪ್ರಸ್ತಾವನೆ" ಎಂದರೆ ಪಿಎಚ್.ಡಿ ಕಾರ್ಯಕ್ರಮದ ನೋಂದಣಿಗಾಗಿ ಅರ್ಜಿಯೊಂದಿಗೆ ಪಿಎಚ್.ಡಿ ವಿದ್ಯಾರ್ಥಿ ಸಲ್ಲಿಸಬೇಕಾದ ಸಂಶೋಧನಾ ಕಾರ್ಯದ ಪ್ರಸ್ತಾವಿತ ರೂಪರೇಷೆಯನ್ನು ನೀಡುವ ಸಂಕ್ಷಿಪ್ತ ಬರಹ;

ವಿ) "ವಿಶ್ವವಿದ್ಯಾಲಯ" ಎಂದರೆ ರಾಜ್ಯ ಕಾಯಿದೆಯ ಅಡಿ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧ರ ಸಂಖ್ಯೆ ೨೩ ಅನ್ವಯ ಸ್ಥಾಪಿಸಲಾದ ಕನ್ನಡ ವಿಶ್ವವಿದ್ಯಾಲಯ.

(೨) ಈ ನಿಯಮಗಳಲ್ಲಿ ಬಳಸಲಾದ ಮತ್ತು ವ್ಯಾಖ್ಯಾನಿಸದ ಆದರೆ ಕಾಯ್ದೆಯಲ್ಲಿ ವ್ಯಾಖ್ಯಾನಿಸಲಾದ ಮತ್ತು ಈ ನಿಯಮಗಳಿಗೆ ಹೊಂದಿಕೆಯಾಗದ ಪದಗಳು ಮತ್ತು ವಿವರಣೆಗಳು ಆ ಕಾಯ್ದೆಯಲ್ಲಿ ಅವುಗಳಿಗೆ ನಿಗದಿಪಡಿಸಿದ ಅರ್ಥಗಳನ್ನು ಹೊಂದಿರುತ್ತವೆ.

**೩. ಪಿಎಚ್.ಡಿ. ಕಾರ್ಯಕ್ರಮದ ಪ್ರವೇಶಾತಿಗೆ ಇರಬೇಕಾದ ಅರ್ಹತಾ ಮಾನದಂಡಗಳು:**

ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಈ ಕೆಳಗಿನ ಅಭ್ಯರ್ಥಿಗಳು ಅರ್ಹರು:

(೧) ಪೂರ್ಣಗೊಳಿಸಿದ ಅಭ್ಯರ್ಥಿಗಳು:

i. ೪ ವರ್ಷ/೮ ಸೆಮಿಸ್ಟರ್ ಬ್ಯಾಚುಲರ್ ಪದವಿ ಕಾರ್ಯಕ್ರಮದ ನಂತರ ೧ ವರ್ಷ/೨ ಸೆಮಿಸ್ಟರ್ ಸ್ನಾತಕೋತ್ತರ ಪದವಿ ಕಾರ್ಯಕ್ರಮ ಅಥವಾ ೩ ವರ್ಷದ ಬ್ಯಾಚುಲರ್ ಪದವಿ ಕಾರ್ಯಕ್ರಮದ ನಂತರ ೨ ವರ್ಷ/೪ ಸೆಮಿಸ್ಟರ್ ಸ್ನಾತಕೋತ್ತರ ಪದವಿ ಕಾರ್ಯಕ್ರಮ ಅಥವಾ ಸಂಬಂಧಿತ ಶಾಸನಬದ್ಧ ನಿಯಂತ್ರಕ ಸಂಸ್ಥೆಯಿಂದ ಸ್ನಾತಕೋತ್ತರ ಪದವಿಗೆ ಸಮಾನವೆಂದು ಘೋಷಿಸಲಾದ ಅರ್ಹತೆಗಳು, ಒಟ್ಟಾರೆಯಾಗಿ ಕನಿಷ್ಠ ೫೫% ಅಂಕಗಳನ್ನು ಪಡೆದ ಅಥವಾ ಪಾಯಿಂಟ್ ಸ್ಕೇಲ್‌ನಲ್ಲಿ ಅದರ ಸಮಾನ ದರ್ಜೆಯಲ್ಲಿ ಗ್ರೇಡಿಂಗ್ ಹೊಂದಿರುವವರು.

ಅಥವಾ

ಸಮಾನಾಂತರ ವಿದ್ಯಾರ್ಹತೆ ಹೊಂದಿರುವ ವಿದೇಶಿ ಶೈಕ್ಷಣಿಕ ಸಂಸ್ಥೆಯಿಂದ ಪಡೆದ ಪದವಿ. ಆ ಸಂಸ್ಥೆ ಆ ದೇಶದಲ್ಲಿ ಕಾನೂನಿನಡಿಯಲ್ಲಿ ಸ್ಥಾಪಿಸಲಾದ ಅಥವಾ ಸಂಯೋಜಿಸಲಾದ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟಿದ್ದ, ಅಥವಾ ಅಧಿಕೃತತೆ ಪಡೆದಿದ್ದ ಅಥವಾ ಆ ದೇಶದ ಯಾವುದೇ ಶಾಸನಬದ್ಧ ಪ್ರಾಧಿಕಾರವು ಶೈಕ್ಷಣಿಕ ಸಂಸ್ಥೆಯ ಗುಣಮಟ್ಟ ಮತ್ತು ಮಾನದಂಡಗಳನ್ನು ನಿರ್ಣಯಿಸುವ ಸಂಸ್ಥೆಯಿಂದ ಮೌಲ್ಯಮಾಪನ ಮತ್ತು ಮಾನ್ಯತೆ ಏಜೆನ್ಸಿಯಿಂದ ಮಾನ್ಯತೆ ಪಡೆದಿರತಕ್ಕದ್ದು,

ಕಾಲಕಾಲಕ್ಕೆ ಆಯೋಗದ ನಿರ್ಧಾರದ ಅನ್ವಯ ಎಸ್ಸಿ/ಎಸ್ಟಿ/ಒಬಿಸಿ (ಕ್ರಿಮಿಲೇಯರ್ ಅಲ್ಲದ)/ವಿಕಲಚೇತನ, ಆರ್ಥಿಕ ದುರ್ಬಲ ವರ್ಗ (ಇಡಬ್ಲ್ಯೂಎಸ್) ಮತ್ತು ಇತರ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಶೇ. ೫% ಅಂಕಗಳ ಸಡಿಲಿಕೆಯಿದೆ ಅಥವಾ ಅದಕ್ಕೆ ಸಮಾನ ದರ್ಜೆಯನ್ನು ಅನುಮತಿಸಬಹುದು.

೪ ವರ್ಷ/೮ ಸೆಮಿಸ್ಟರ್ ಬ್ಯಾಚುಲರ್ ಪದವಿ ಕಾರ್ಯಕ್ರಮದ ನಂತರ ಪ್ರವೇಶ ಪಡೆಯಲು ಬಯಸುವ ಅಭ್ಯರ್ಥಿಯು ಒಟ್ಟಾರೆಯಾಗಿ ಕನಿಷ್ಠ ೭೫% ಅಂಕಗಳನ್ನು ಅಥವಾ ಗ್ರೇಡಿಂಗ್ ವ್ಯವಸ್ಥೆಯನ್ನು ಅನುಸರಿಸುವಲ್ಲಿ ಪಾಯಿಂಟ್ ಸ್ಕೇಲ್‌ನಲ್ಲಿ ಅದಕ್ಕೆ ಸಮಾನ ದರ್ಜೆಯನ್ನು ಹೊಂದಿರಬೇಕು. ಕಾಲಕಾಲಕ್ಕೆ ಆಯೋಗದ ನಿರ್ಧಾರದ ಪ್ರಕಾರ ಎಸ್ಸಿ/ಎಸ್ಟಿ/ಒಬಿಸಿ (ಕ್ರೀಮಿ ಲೇಯರ್ ಅಲ್ಲದ)/ವಿಕಲಚೇತನ, ಆರ್ಥಿಕ

2/4/25



Scanned with OKEN Scanner

ದುರ್ಬಲ ವರ್ಗ (ಇಡಬ್ಲ್ಯೂಎಸ್) ಮತ್ತು ಇತರ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಶೇ. ೫% ಅಂಕಗಳ ಸಡಿಲಿಕೆಯಿದೆ ಅಥವಾ ಅದಕ್ಕೆ ಸಮಾನ ದರ್ಜೆಯನ್ನು ಅನುಮತಿಸಬಹುದು.

(೨) ಎಂ.ಫಿಲ್ ಪೂರ್ಣಗೊಳಿಸಿದ ಅಭ್ಯರ್ಥಿಗಳು. ಒಟ್ಟಾರೆಯಾಗಿ ಕನಿಷ್ಠ ೫೫% ಅಂಕಗಳನ್ನು ಅಥವಾ ಪಾಯಿಂಟ್ ಸ್ಕೇಲ್‌ನಲ್ಲಿ ಅದಕ್ಕೆ ಸಮಾನವಾದ ಗ್ರೇಡ್ ಹೊಂದಿರುವ ಕಾರ್ಯಕ್ರಮ ಅಥವಾ ಮೌಲ್ಯಮಾಪನ ಮತ್ತು ಮಾನ್ಯತೆ ನೀಡುವ ಸಂಸ್ಥೆಯಿಂದ ಮಾನ್ಯತೆ ಪಡೆದ ವಿದೇಶಿ ಶಿಕ್ಷಣ ಸಂಸ್ಥೆಯಿಂದ ಸಮಾನ ಅರ್ಹತೆಯನ್ನು ಪಡೆದಿರುವ ಮತ್ತು ಆ ದೇಶದ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ಸಂಘಟಿತವಾದ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ, ಗುರುತಿಸಲ್ಪಟ್ಟ ಅಥವಾ ಅಧಿಕೃತಗೊಳಿಸಲ್ಪಟ್ಟ ಪದವಿಯು ಪಿಎಚ್‌ಡಿ ಕಾರ್ಯಕ್ರಮದ ಪ್ರವೇಶಕ್ಕೆ ಅರ್ಹವಾಗಿರುತ್ತದೆ. ಕಾಲಕಾಲಕ್ಕೆ ಆಯೋಗದ ನಿರ್ಧಾರದ ಪ್ರಕಾರ ಎಸ್ಸಿ/ಎಸ್ಟಿ/ಒಬಿಸಿ (ಕ್ರೀಮಿ ಲೇಯರ್ ಅಲ್ಲದ)/ವಿಕಲಚೇತನ, ಆರ್ಥಿಕ ದುರ್ಬಲ ವರ್ಗ (ಇಡಬ್ಲ್ಯೂಎಸ್) ಮತ್ತು ಇತರ ವರ್ಗದ ಅಭ್ಯರ್ಥಿಗಳಿಗೆ ಶೇ. ೫% ಅಂಕಗಳ ಸಡಿಲಿಕೆಯಿದೆ ಅಥವಾ ಅದಕ್ಕೆ ಸಮಾನ ದರ್ಜೆಯನ್ನು ಅನುಮತಿಸಬಹುದು.

**೪. ಪಿಎಚ್.ಡಿ. ಕಾರ್ಯಕ್ರಮದ ಅವಧಿ:**

(೧). ಪಿಎಚ್.ಡಿ ಕಾರ್ಯಕ್ರಮವು ಕೋರ್ಸ್‌ವರ್ಕ್ ಸೇರಿದಂತೆ ಕನಿಷ್ಠ ಮೂರು (೩) ವರ್ಷಗಳ ಅವಧಿಯದ್ದಾಗಿರುತ್ತದೆ ಮತ್ತು ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ದಿನಾಂಕದಿಂದ ಗರಿಷ್ಠ ಆರು (೬) ವರ್ಷಗಳ ಅವಧಿಯದ್ದಾಗಿರುತ್ತದೆ. ಪೂರ್ಣಕಾಲಿಕವಾಗಿ ಪ್ರವೇಶ ಪಡೆದ ಅಭ್ಯರ್ಥಿಯ ಆಸಕ್ತಿ, ಅಸಾಧಾರಣ ಸಂದರ್ಭಗಳಲ್ಲಿ, ಮಾರ್ಗದರ್ಶಕರು ಮತ್ತು ಸಂಶೋಧನಾ ಸಲಹಾ ಸಮಿತಿಯ ಶಿಫಾರಸಿನೊಂದಿಗೆ ಅರೆಕಾಲಿಕವಾಗಿ ಪರಿವರ್ತಿಸಲು ಅವಕಾಶ ನೀಡಬಹುದು. ಆದಾಗ್ಯೂ, ಈ ವಿಷಯದಲ್ಲಿ ಕುಲಪತಿಗಳ ನಿರ್ಧಾರವು ಅಂತಿಮವಾಗಿರುತ್ತದೆ.

(೨). ಯುಜಿಸಿ ಪಿಎಚ್.ಡಿ ನಿಯಮಗಳು ೨೦೨೨ರ ಪ್ರಕಾರ ಮರು–ನೋಂದಣಿ ಪ್ರಕ್ರಿಯೆಯ ಮೂಲಕ ಗರಿಷ್ಠ ಎರಡು (೨) ವರ್ಷಗಳ ಅವಧಿಯನ್ನು ನೀಡಬಹುದು; ಆದಾಗ್ಯೂ, ಪಿಎಚ್.ಡಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಒಟ್ಟು ಅವಧಿಯು ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ದಿನಾಂಕದಿಂದ ಎಂಟು (೮) ವರ್ಷಗಳನ್ನು ಮೀರಬಾರದು. ಇದಲ್ಲದೆ, ಮಹಿಳಾ ಪಿಎಚ್.ಡಿ ವಿದ್ಯಾರ್ಥಿಗಳು ಮತ್ತು ವಿಕಲಚೇತನರು (೪೦% ಕ್ಕಿಂತ ಹೆಚ್ಚು ಅಂಗವೈಕಲ್ಯ ಹೊಂದಿರುವವರು) ಎರಡು (೨) ವರ್ಷಗಳ ಅವಧಿಗೆ ಹೆಚ್ಚುವರಿ ಸಡಿಲಿಕೆಯನ್ನು ಅನುಮತಿಸಬಹುದು; ಆದಾಗ್ಯೂ, ಅಂತಹ ಸಂದರ್ಭಗಳಲ್ಲಿ ಪಿಎಚ್.ಡಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಒಟ್ಟು ಅವಧಿಯು ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ದಿನಾಂಕದಿಂದ ಹತ್ತು (೧೦) ವರ್ಷಗಳನ್ನು ಮೀರಬಾರದು.

(೩). ಮಹಿಳಾ ಪಿಎಚ್.ಡಿ ವಿದ್ಯಾರ್ಥಿಗೆ ಪಿಎಚ್.ಡಿ ಕಾರ್ಯಕ್ರಮದ ಸಂಪೂರ್ಣ ಅವಧಿಯಲ್ಲಿ ೨೪೦ ದಿನಗಳವರೆಗೆ ಹೆರಿಗೆ ರಜೆ/ಮಕ್ಕಳ ಆರೈಕೆ ರಜೆಯನ್ನು ನೀಡಬಹುದು.

(೪) ಮೇಲಿನ ಮಿತಿಯನ್ನು ಮೀರಿ ವಿಸ್ತರಣೆಯನ್ನು ಮಾಡಲು, ಕುಲಪತಿಗಳು ಗರಿಷ್ಠ ಒಂದು ವರ್ಷದ ಅವಧಿಗೆ ಅನುಮತಿ ನೀಡಬಹುದು.

**೫. ಪ್ರವೇಶ ಪ್ರಕ್ರಿಯೆ:**

(೧). ಪ್ರವೇಶವು ವಿಶ್ವವಿದ್ಯಾಲಯವು ಸೂಚಿಸುವ ಮಾನದಂಡಗಳನ್ನು ಆಧರಿಸಿರುತ್ತದೆ, ಯುಜಿಸಿ ಮತ್ತು ಸಂಬಂಧಿತ ಇತರ ಶಾಸನಬದ್ಧ/ನಿಯಂತ್ರಕ ಸಂಸ್ಥೆಗಳು ಈ ನಿಟ್ಟಿನಲ್ಲಿ ಹೊರಡಿಸಿದ



Scanned with OKEN Scanner

ಮಾರ್ಗಸೂಚಿಗಳು/ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಕಾಲಕಾಲಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಮೀಸಲಾತಿ ನೀತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

(೨). ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶವನ್ನು ಈ ಕೆಳಗಿನ ವಿಧಾನಗಳನ್ನು ಬಳಸಿಕೊಂಡು ಮಾಡಲಾಗುತ್ತದೆ:

೧. ಯುಜಿಸಿ–ನೆಟ್/ಯುಜಿಸಿ–ಸಿಎಸ್ಐಆರ್ ನೆಟ್/ಗೇಟ್/ಸಿಇಇಡಿ ಅಥವಾ ಅಂತಹುದೇ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಫೆಲೋಶಿಪ್/ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದ ವಿದ್ಯಾರ್ಥಿಗಳನ್ನು ಸಂದರ್ಶನದ ಆಧಾರದ ಮೇಲೆ ವಿಶ್ವವಿದ್ಯಾಲಯವು ಪ್ರವೇಶ ನೀಡಬಹುದು. ಈ ಅರ್ಹತೆ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳಲ್ಲಿ ೭೦% ಅಂಕಗಳನ್ನು ಲಿಖಿತ ಪರೀಕ್ಷೆಯ ಭಾಗದಲ್ಲಿ ಪರಿಗಣಿಸುವುದು.

ಮತ್ತು/ಅಥವಾ

೨. ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ನಡೆಸುವ ಪ್ರವೇಶ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದು. ಪ್ರವೇಶ ಪರೀಕ್ಷೆಯ ಪಠ್ಯಕ್ರಮವು ೫೦% ಸಂಶೋಧನಾ ವಿಧಾನವನ್ನು ಮತ್ತು ೫೦% ಸಂಬಂಧಿತ ವಿಷಯವನ್ನು ಒಳಗೊಂಡಿರುತ್ತದೆ.

೩. ಪ್ರವೇಶ ಪರೀಕ್ಷೆಯಲ್ಲಿ ೫೦% ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಸಂದರ್ಶನಕ್ಕೆ ಕರೆಯಲು ಅರ್ಹರಾಗಿರುತ್ತಾರೆ.

೪. ಕಾಲಕಾಲಕ್ಕೆ ಆಯೋಗದ ನಿರ್ಧಾರದಂತೆ ಎಸ್ಸಿ/ಎಸ್ಟಿ/ಒಬಿಸಿ/ವಿಕಲಚೇತನ ವರ್ಗ, ಆರ್ಥಿಕ ದುರ್ಬಲ ವರ್ಗ (ಇಡಬ್ಲ್ಯೂಎಸ್) ಮತ್ತು ಇತರ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಲ್ಲಿ ಶೇ. ೫% ರಷ್ಟು ಅಂಕಗಳ ಸಡಿಲಿಕೆಯನ್ನು ನೀಡಲಾಗುತ್ತದೆ.

೫. ಲಭ್ಯವಿರುವ ಪಿಎಚ್.ಡಿ ಸೀಟುಗಳ ಸಂಖ್ಯೆಯನ್ನು ಆಧರಿಸಿ ಸಂದರ್ಶನಕ್ಕೆ ಕರೆಯಬೇಕಾದ ಅರ್ಹ ವಿದ್ಯಾರ್ಥಿಗಳ ಸಂಖ್ಯೆಯನ್ನು ವಿಶ್ವವಿದ್ಯಾಲಯವು ನಿರ್ಧರಿಸುತ್ತದೆ.

೬. ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯ ಆಧಾರದ ಮೇಲೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಪ್ರವೇಶ ಪರೀಕ್ಷೆಗೆ ೭೦% ಮತ್ತು ಸಂದರ್ಶನ/ಮೌಖಿಕ ಪರೀಕ್ಷೆಯಲ್ಲಿನ ಕಾರ್ಯಕ್ಷಮತೆಗೆ ೩೦% ವೇಟೇಜ್ ನೀಡಲಾಗುತ್ತದೆ.

(೩). ವಿಶ್ವವಿದ್ಯಾಲಯದ ಅಧ್ಯಯನಾಂಗವು ಪಿಎಚ್.ಡಿ ಕಾರ್ಯಕ್ರಮಗಳಿಗೆ ಅಧಿಸೂಚನೆ ಪ್ರಕಟಿಸುವ ಪೂರ್ವದಲ್ಲಿ:

೧. ಪ್ರವೇಶದ ಸೀಟುಗಳ ಸಂಖ್ಯೆ, ವಿಷಯ/ವಿಭಾಗವಾರು ಲಭ್ಯವಿರುವ ಸೀಟುಗಳ ಹಂಚಿಕೆ, ಪ್ರವೇಶದ ಮಾನದಂಡಗಳು, ಪ್ರವೇಶಾತಿ ಪ್ರಕ್ರಿಯೆ ಮತ್ತು ಅಭ್ಯರ್ಥಿಗಳಿಗೆ ಸಂಬಂಧಿಸಿದ ಎಲ್ಲಾ ಇತರ ಮಾಹಿತಿಯನ್ನು ನಿರ್ದಿಷ್ಟಪಡಿಸುವ ಕೈಪಿಡಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಮುಂಚಿತವಾಗಿ ಪ್ರಕಟಿಸಬೇಕು;

೨. ರಾಷ್ಟ್ರೀಯ/ರಾಜ್ಯ ಮಟ್ಟದ ಮೀಸಲಾತಿ ನಿಯಮದಲ್ಲಿ ಅನ್ವಯವಾಗುವ ನೀತಿಯನ್ನು ಅನುಸರಿಸಬೇಕು.

2/4/25



Scanned with OKEN Scanner

(೪). ವಿಶ್ವವಿದ್ಯಾನಿಲಯದ ಅಧ್ಯಯನಾಂಗವು ಪಿಎಚ್.ಡಿ ಮಾರ್ಗದರ್ಶಕರು/ಮೇಲ್ವಿಚಾರಕರ ಪಟ್ಟಿಯನ್ನು (ಮಾರ್ಗಧರ್ಶಕರ ಹೆಸರು, ಅವರ ಹುದ್ದೆ ಮತ್ತು ವಿಭಾಗ/ವಿಸ್ತಾರಣಾ ಕೇಂದ್ರ/ ಸಂಶೋಧನಾ ಕೇಂದ್ರವನ್ನು ನಿರ್ದಿಷ್ಟಪಡಿಸುತ್ತದೆ), ಪಿಎಚ್.ಡಿ ವಿದ್ಯಾರ್ಥಿಗಳ ವಿವರಗಳೊಂದಿಗೆ (ನೋಂದಾಯಿತ ಪಿಎಚ್.ಡಿ ವಿದ್ಯಾರ್ಥಿಗಳ ಹೆಸರು, ಅವರ ಸಂಶೋಧನೆಯ ವಿಷಯ ಮತ್ತು ಪ್ರವೇಶ ದಿನಾಂಕದ ವಿವರವನ್ನು ಒಳಗೊಂಡ ಪಟ್ಟಿ) ಸಂಸ್ಥೆಯ ವೆಬ್‌ಸೈಟ್‌ನಲ್ಲಿ ನೀಡಬೇಕು ಮತ್ತು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಈ ಪಟ್ಟಿಯನ್ನು ನವೀಕರಿಸಬೇಕು.

**೬. ಮಾರ್ಗದರ್ಶಕರು/ ಸಂಶೋಧನಾ ಮೇಲ್ವಿಚಾರಕರ ನಿಗದಿ:**

ಮಾರ್ಗದರ್ಶಕರು, ಸಹ-ಮಾರ್ಗದರ್ಶಕರು, ಪ್ರತಿ ಮಾರ್ಗದರ್ಶಕರಿಗೆ ಅನುಮತಿಸಲಾದ ಪಿಎಚ್.ಡಿ ವಿದ್ಯಾರ್ಥಿಗಳ ಸಂಖ್ಯೆ ಇತ್ಯಾದಿಗಳಿಗಿರುವ ಅರ್ಹತಾ ಮಾನದಂಡಗಳು;

(೧) ವಿಶ್ವವಿದ್ಯಾಲಯ ಮತ್ತು ಅದರ ಅಧ್ಯಯನ ವಿಭಾಗಗಳು/ ವಿಸ್ತರಣಾ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುವ ಖಾಯಂ ಬೋಧಕ ಸದಸ್ಯರು, ಪಿಎಚ್‌ಡಿ ಹೊಂದಿರುವ ಮತ್ತು ಪೀರ್-ರಿವ್ಯೂಡ್ ಅಥವಾ ರೆಫರಿಡ್ ಜರ್ನಲ್‌ಗಳಲ್ಲಿ ಕನಿಷ್ಠ ಐದು ಸಂಶೋಧನಾ ಪ್ರಕಟಣೆಗಳನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯ ಮತ್ತು ಅದರ ಅಧ್ಯಯನ ವಿಭಾಗಗಳು / ವಿಸ್ತರಣಾ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುವ ಖಾಯಂ ಬೋಧಕ ಸದಸ್ಯರು, ಪಿಎಚ್‌ಡಿ ಹೊಂದಿರುವ ಮತ್ತು ಪೀರ್-ರಿವ್ಯೂಡ್ ಅಥವಾ ರೆಫರಿಡ್ ಜರ್ನಲ್‌ಗಳಲ್ಲಿ ಕನಿಷ್ಠ ಮೂರು ಸಂಶೋಧನಾ ಪ್ರಕಟಣೆಗಳನ್ನು ಪ್ರಕಟಿಸಿರುವ ಸದಸ್ಯರನ್ನು ವಿಶ್ವವಿದ್ಯಾಲಯದಲ್ಲಿ ಅಥವಾ ಅದರ ಸಂಯೋಜಿತ ಸ್ನಾತಕೋತ್ತರ ಕಾಲೇಜುಗಳು/ಸಂಸ್ಥೆಗಳಲ್ಲಿ ಸಂಶೋಧನಾ ಮಾರ್ಗದರ್ಶಕರನ್ನಾಗಿ ಗುರುತಿಸಬಹುದು. ಅಂತಹ ಮಾನ್ಯತೆ ಪಡೆದ ಸಂಶೋಧನಾ ಮಾರ್ಗದರ್ಶಕರು ತನ್ನದಲ್ಲದ ಇತರ ಸಂಸ್ಥೆಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವಂತಿಲ್ಲ. ಅಲ್ಲಿ ಅವರು ಸಹ-ಮಾರ್ಗದರ್ಶಕರಾಗಿ ಮಾತ್ರ ಕಾರ್ಯನಿರ್ವಹಿಸಬಹುದು. ವಿಶ್ವವಿದ್ಯಾಲಯ ಅಥವಾ ಅದರ ಸಂಯೋಜಿತ ಸ್ನಾತಕೋತ್ತರ ಕಾಲೇಜುಗಳು/ಸಂಸ್ಥೆಗಳ ಉದ್ಯೋಗಿಯಲ್ಲದ ಅಧ್ಯಾಪಕರ ಮಾರ್ಗದರ್ಶನದಲ್ಲಿ ವಿಶ್ವವಿದ್ಯಾನಿಲಯವು ನೀಡುವ ಪಿಎಚ್‌ಡಿ. ಪದವಿಗಳು ಈ ನಿಯಮಗಳ ಉಲ್ಲಂಘನೆಯಾಗುತ್ತವೆ.

ಕೇಂದ್ರ ಸರ್ಕಾರ/ರಾಜ್ಯ ಸರ್ಕಾರಿ ಸಂಶೋಧನಾ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿಗಳನ್ನು ನೀಡಿದ್ದರೆ, ಅವರು ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರಿಗೆ ಸಮಾನವಾದ ಅಂತಹ ಸಂಶೋಧನಾ ಸಂಸ್ಥೆಗಳಲ್ಲಿ ವಿಜ್ಞಾನಿಗಳಾಗಿದ್ದರೆ, ಮೇಲಿನ ಅವಶ್ಯಕತೆಗಳನ್ನು ಪೂರೈಸಿದರೆ ಅವರನ್ನು ಮಾರ್ಗದರ್ಶಕರೆಂದು ಗುರುತಿಸಬಹುದು.

ನಿಯಮಿತ ಸಂಖ್ಯೆಯ ಪೀರ್-ರಿವ್ಯೂಡ್ ಅಥವಾ ರೆಫರಿಡ್ ಜರ್ನಲ್‌ಗಳು ಇಲ್ಲದಿರುವ ಪ್ರದೇಶಗಳು/ವಿಭಾಗಗಳಲ್ಲಿ, ಲಿಖಿತವಾಗಿ ದಾಖಲಿಸಲಾದ ಕಾರಣಗಳೊಂದಿಗೆ ಒಬ್ಬ ವ್ಯಕ್ತಿಯನ್ನು ಸಂಶೋಧನಾ ಮಾರ್ಗದರ್ಶಕರಾಗಿ ಗುರುತಿಸಲು ವಿಶ್ವವಿದ್ಯಾಲಯವು ಮೇಲಿನ ಷರತ್ತನ್ನು ಸಡಿಲಿಸುವ ಅವಕಾಶವಿದೆ.

ಅದೇ ವಿಭಾಗದ ಅಥವಾ ಅದೇ ಸಂಸ್ಥೆಯ ಅಥವಾ ಇತರ ಸಂಸ್ಥೆಗಳ ಇತರ ವಿಭಾಗಗಳ ಸಹ-ಮಾರ್ಗದರ್ಶಕರಿಗೂ ಸಹ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಅನುಮತಿ ನೀಡಬಹುದು.

2/4/25



Scanned with OKEN Scanner

ಅಡ್ಜಂಕ್ಟ್ ಫ್ಯಾಕಲ್ಟಿ" ಸದಸ್ಯರು ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಅವಕಾಶವಿರುವುದಿಲ್ಲ ಆದರೆ ಸಹ-ಮಾರ್ಗದರ್ಶಕರಾಗಿ ಮಾತ್ರ ಕಾರ್ಯನಿರ್ವಹಿಸಬಹುದು.

(೨). ಅಂತರಶಿಸ್ತೀಯ/ ಬಹುಶಿಸ್ತೀಯ ಸಂಶೋಧನಾ ಕಾರ್ಯದ ಸಂದರ್ಭದಲ್ಲಿ, ಅಗತ್ಯವಿದ್ದರೆ, ವಿಭಾಗ/ಶಾಲೆ/ ಕೇಂದ್ರ/ಕಾಲೇಜು/ವಿಶ್ವವಿದ್ಯಾಲಯದ ಹೊರಗಿನವರನ್ನು ಸಹ-ಮಾರ್ಗದರ್ಶಕರನ್ನಾಗಿ ನೇಮಿಸಬಹುದು.

(೩). ಅರ್ಹ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು ಯಾವುದೇ ಸಮಯದಲ್ಲಿ ಕ್ರಮವಾಗಿ ಎಂಟು (೮) / ಆರು (೬) / ನಾಲ್ಕು (೪) ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬಹುದು.

(೪). ವಿವಾಹ ಅಥವಾ ಇತರ ಕಾರಣಗಳಿಂದ ಮಹಿಳಾ ಪಿಎಚ್.ಡಿ ವಿದ್ಯಾರ್ಥಿಗಳು ಸ್ಥಳಾಂತರವಾದ ಸಂದರ್ಭದಲ್ಲಿ, ಸಂಶೋಧನಾರ್ಥಿಯ ಮಾಹಿತಿಯನ್ನು ವಿದ್ಯಾರ್ಥಿ ಸ್ಥಳಾಂತರಗೊಳ್ಳಲು ಉದ್ದೇಶಿಸಿರುವ ಉನ್ನತ ಶಿಕ್ಷಣ ಸಂಸ್ಥೆಗೆ ವರ್ಗಾಯಿಸಲು ಅನುಮತಿಸಲಾಗಿದೆ. ಈ ನಿಯಮಗಳಲ್ಲಿನ ಎಲ್ಲಾ ಇತರ ಷರತ್ತುಗಳನ್ನು ಅನುಪಾಲನೆಗೆ ಒಳಪಟ್ಟಿರುತ್ತದೆಯೇ ಹೊರತು ಈ ಸಂಶೋಧನಾ ಕಾರ್ಯಕ್ಕೆ ನೆರವು ನೀಡಿದ ಯಾವುದೇ ಹಣಕಾಸು ಸಂಸ್ಥೆ, ಪೋಷಕ ಸಂಸ್ಥೆ, ಮಾರ್ಗದರ್ಶಕರ ಮಂಜೂರು ಮಾಡಲಾದ ಯೋಜನೆಗೆ ಸಂಬಂಧಿಸಿರುವುದಿಲ್ಲ. ಆದಾಗ್ಯೂ, ಅಂತಹ ವಿದ್ಯಾರ್ಥಿಗೆ ಈಗಾಗಲೇ ಕೈಗೊಂಡ ಸಂಶೋಧನೆಯ ಭಾಗಕ್ಕೆ ಪೋಷಕ ಸಂಸ್ಥೆ ಮತ್ತು ಮಾರ್ಗದರ್ಶಕರು ಸರಿಯಾದ ಕ್ರೆಡಿಟ್ ನೀಡಬೇಕು.

(೫). ನಿವೃತ್ತಿಯ ಮೊದಲು ಮೂರು ವರ್ಷಗಳಿಗಿಂತ ಕಡಿಮೆ ಸೇವೆಯನ್ನು ಹೊಂದಿರುವ ಬೋಧಕ ಸದಸ್ಯರು ಹೊಸ ಪಿಎಚ್.ಡಿ ವಿದ್ಯಾರ್ಥಿಗಳನ್ನು ತಮ್ಮ ಮಾರ್ಗದರ್ಶನ/ಮೇಲ್ವಿಚಾರಣೆಗೆ ತೆಗೆದುಕೊಳ್ಳಲು ಅನುಮತಿ ಇರುವುದಿಲ್ಲ. ಆದಾಗ್ಯೂ, ಅಂತಹ ಅಧ್ಯಾಪಕ ಸದಸ್ಯರು ನಿವೃತ್ತಿಯವರೆಗೆ ಈಗಾಗಲೇ ನೋಂದಾಯಿಸಿಕೊಂಡಿರುವ ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ/ಮೇಲ್ವಿಚಾರಣೆಯನ್ನು ಮುಂದುವರಿಸಬಹುದು ಮತ್ತು ನಿವೃತ್ತಿಯ ನಂತರ ಸಹ-ಮಾರ್ಗದರ್ಶನಕ್ಕೆ ನೋಂದಾಯಿಸಿಕೊಂಡಿರುವ ಬೋಧಕ ಸದಸ್ಯರು ೭೦ ವರ್ಷ ವಯಸ್ಸನ್ನು ತಲುಪಿದ ನಂತರ ಮುಂದುವರೆಯುವಂತಿಲ್ಲ.

**೭. ಪಿಎಚ್.ಡಿ ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಪ್ರವೇಶಾತಿ:**

(೧) ಮೇಲಿನ ಷರತ್ತು ೬.೩ ರಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರತಿ ಮಾರ್ಗದರ್ಶಕರು ಎರಡು ಅಂತಾರಾಷ್ಟ್ರೀಯ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಅನುಮತಿ ಪಡೆದ ಸಂಖ್ಯೆಯಲ್ಲಿ ಮತ್ತು ಅನುಮತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸೂಪರ್‌ನ್ಯೂಮರರಿ ಆಧಾರದ ಮೇಲೆ ಮಾರ್ಗದರ್ಶನ ನೀಡಬಹುದು.

(೨). ಕಾಲಕಾಲಕ್ಕೆ ಸಂಬಂಧಪಟ್ಟ ಶಾಸನಬದ್ಧ/ನಿಯಂತ್ರಕ ಸಂಸ್ಥೆಗಳು ಹೊರಡಿಸಿದ ಮಾರ್ಗಸೂಚಿಗಳು/ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಪಿಎಚ್.ಡಿ ಪ್ರವೇಶಕ್ಕಾಗಿ ವಿಶ್ವವಿದ್ಯಾಲಯವು ತನ್ನದೇ ಆದ ಆಯ್ಕೆ ವಿಧಾನವನ್ನು ನಿರ್ಧರಿಸಬಹುದು.

**೮. ಯಾವುದೇ ಹಂತದಲ್ಲಿ, ಮಾರ್ಗದರ್ಶಕರ/ಮೇಲ್ವಿಚಾರಕ ಅಥವಾ ಸಹ – ಮಾರ್ಗದರ್ಶಕರಾಗಿ/ಸಹ-ಮೇಲ್ವಿಚಾರಕರಾಗಿರುವ ಅಧ್ಯಾಪಕ ಸದಸ್ಯರ ಅಡಿಯಲ್ಲಿ ಒಟ್ಟು ಪಿಎಚ್.ಡಿ ವಿದ್ಯಾರ್ಥಿಗಳ ಸಂಖ್ಯೆ ಷರತ್ತು ೬.೩. ಮತ್ತು ಷರತ್ತು ೭.೧ ರಲ್ಲಿ ಸೂಚಿಸಲಾದ ಸಂಖ್ಯೆಯನ್ನು ಮೀರಬಾರದು.**

**೯. ಕೋರ್ಸ್‌ವರ್ಕ್**

ಕೋರ್ಸ್‌ವರ್ಕ್ ಪೂರ್ಣಗೊಳಿಸಲು ಕನಿಷ್ಠ ಮಾನದಂಡಗಳಲ್ಲಿ ಅಗತ್ಯವಾದ ಕ್ರೆಡಿಟ್, ಅವುಗಳ ಸಂಖ್ಯೆ, ಅವಧಿ, ಪಠ್ಯಕ್ರಮ ಮತ್ತು ಇತ್ಯಾದಿ:



Scanned with OKEN Scanner

(೧)ಪಿಎಚ್.ಡಿ ಕೋರ್ಸ್‌ವರ್ಕ್‌ಗೆ ಕನಿಷ್ಠ ೧೨ ಕ್ರೆಡಿಟ್ ಮತ್ತು ಗರಿಷ್ಠ ೧೬ ಕ್ರೆಡಿಟ್‌ಗಳ ಅಧ್ಯಯನಕ್ಕೆ ಅವಕಾಶವಿದೆ. ಇದರಲ್ಲಿ ಯುಜಿಸಿ ೨೦೧೯ರಲ್ಲಿ ಡಿ.ಒ.ಸಂಖ್ಯೆ ಎಫ್.೧-೧/೨೦೧೮ (ಜರ್ನಲ್/ಕೇರ್) ಪತ್ರದ ಮೂಲಕ ಸೂಚಿಸಿದಂತೆ "ಸಂಶೋಧನೆ ಮತ್ತು ಪ್ರಕಟಣೆ ನೀತಿ"ಯ ೨ ಕ್ರೆಡಿಟ್‌ಗಳ ಕೋರ್ಸ್ ಸಹ ಸೇರಿದೆ.

ಕೋರ್ಸ್‌ವರ್ಕ್ ಪತ್ರದ ಶೀರ್ಷಿಕೆ, ಬೋಧನಾ ವಿಧ, ಕ್ರೆಡಿಟ್, ಅವಧಿ, ಪರೀಕ್ಷೆ ವಿವರ ಹೀಗಿದೆ:

| ಕೋರ್ಸ್ ನಂ. | ಕೋರ್ಸ್ ಶೀರ್ಷಿಕೆ | ಎಲ್:ಟಿ:ಪಿನಲ್ಲಿ ಕ್ರೆಡಿಟ್ | ಬೋಧನಾ ಅವಧಿ | ಕ್ರೆಡಿಟ್ | ಅಂಕಗಳು | | | ಕನಿಷ್ಠ ಗಳಿಸಬೇಕಾದ ಅಂಕಗಳು | ಪರೀಕ್ಷೆ ಅವಧಿ |
|---|---|---|---|---|---|---|---|---|---|
| | | | | | ಆಂತರಿಕ | ಪರೀಕ್ಷೆ | ಒಟ್ಟು | | |
| ಸಿ-೧ | ಸಂಶೋಧನಾ ವೈಧಾನಿಕತೆ | 4:0:0 | 60 | 4 | 70 | 30 | 100 | 55 | 3 ಗಂಟೆ |
| ಸಿ-೨ | ಪರಿಭಾಷೆ ಮತ್ತು ಸಿದ್ಧಾಂತ | 4:0:0 | 60 | 4 | 70 | 30 | 100 | 55 | 3 ಗಂಟೆ |
| ಸಿ-೩ | ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ ಅಧ್ಯಯನ ಸಮೀಕ್ಷೆ | 1:2:2 | 60 | 4 | 70 | 30 | 100 | 55 | 3 ಗಂಟೆ |
| ಸಿ-೪ | ಸಂಶೋಧನೆ ಮತ್ತು ಪ್ರಕಟಣಾ ನೀತಿ | 1:3:1 | 30 | 2 | 35 | 15 | 50 | 27.5 | 1.5 ಗಂಟೆ |
| ಒಟ್ಟು | | | 210 | 14 | 245 | 105 | 350 | 192.5 | |

ಪ್ರತಿ ವಿಭಾಗದ ಅಧ್ಯಯನ ಮಂಡಳಿ ಪಠ್ಯಕ್ರಮಕ್ಕೆ ಮತ್ತು ಪರೀಕ್ಷೆ ಮಂಡಳಿ ಪರೀಕ್ಷೆ ಕಾರ್ಯಕ್ಕೆ ಜವಾಬ್ದಾರಿಯಾಗಿರುತ್ತದೆ. ಸಂಶೋಧನಾ ಸಲಹಾ ಸಮಿತಿಯು ಪಿಎಚ್.ಡಿ ಅಧ್ಯಯನದ ಭಾಗವಾಗಿ ಕ್ರೆಡಿಟ್ ಅವಶ್ಯಕತೆಯನ್ನು ಪೂರೈಸಲು ಯುಜಿಸಿಯ ಆನ್‌ಲೈನ್ ಮಾನ್ಯತೆ ಕೋರ್ಸ್‌ಗಳನ್ನು ಸಹ ಶಿಫಾರಸ್ಸು ಮಾಡಬಹುದು.

(೨) ಯಾವುದೇ ಅಧ್ಯಯನ ವಿಭಾಗ/ಕೋರ್ಸ್/ ಅಧ್ಯಯನ ಶಿಸ್ತಿನಲ್ಲಿ ಇರುವ ಎಲ್ಲಾ ಪಿಎಚ್.ಡಿ ವಿದ್ಯಾರ್ಥಿಗಳು ತಮ್ಮ ಡಾಕ್ಟರೇಟ್ ಅಧ್ಯಯನ ಅವಧಿಯಲ್ಲಿ ಅವರು ಆಯ್ಕೆ ಮಾಡಿದ ಪಿಎಚ್.ಡಿ ವಿಷಯಕ್ಕೆ ಸಂಬಂಧಿಸಿದ ಬೋಧನೆ / ಕಲಿಕೆ / ಸಂವಾದ/ ಬರವಣಿಗೆಯ ತರಬೇತಿ ಕಾರ್ಯವನ್ನು ನಿರ್ವಹಿಸಬಹುದು. ಪ್ರತಿ ಪಿಎಚ್.ಡಿ ವಿದ್ಯಾರ್ಥಿಗೂ ಬೋಧನೆ / ಸಂಶೋಧನಾ ಸಹಾಯಕ ಕೆಲಸಗಳನ್ನು ನಿರ್ವಹಿಸಲು ಮತ್ತು ಟ್ಯುಟೋರಿಯಲ್ ತರಗತಿ ಹಾಗೂ ಮೌಲ್ಯಮಾಪನಗಳನ್ನು ನಡೆಸಲು ವಾರಕ್ಕೆ ೪-೬ ಗಂಟೆಗಳನ್ನು ಮಾತ್ರ ನಿಯೋಜಿಸಬಹುದು.

2/4/25



Scanned with OKEN Scanner

(೩) ಪಿಎಚ್.ಡಿ ವಿದ್ಯಾರ್ಥಿ ಕೋರ್ಸ್‌ವರ್ಕ್ ಪರೀಕ್ಷೆಯಲ್ಲಿ ಕನಿಷ್ಠ ೫೫% ಅಂಕಗಳು ಅಥವಾ ಯುಜಿಸಿ ೧೦-ಪಾಯಿಂಟ್ ಸ್ಕೇಲ್‌ನಲ್ಲಿ ಅದಕ್ಕೆ ಸಮಾನವಾದ ದರ್ಜೆಯನ್ನು ಪಡೆದರೆ ಮಾತ್ರ ಪಿಎಚ್.ಡಿ. ಕಾರ್ಯಕ್ರಮದಲ್ಲಿ ಮುಂದುವರೆಯಲು ಮತ್ತು ತಮ್ಮ ಪ್ರಬಂಧವನ್ನು ಸಲ್ಲಿಸಲು ಅರ್ಹತೆ ಪಡೆಯುತ್ತಾರೆ.

**೧೦. ಸಂಶೋಧನಾ ಸಲಹಾ ಸಮಿತಿ ರಚನೆ ಮತ್ತು ಅದರ ಕಾರ್ಯಗಳು:**

(೧) ಪ್ರತಿಯೊಬ್ಬ ಪಿಎಚ್.ಡಿ ವಿದ್ಯಾರ್ಥಿಗೂ ವಿಶ್ವವಿದ್ಯಾಲಯದ ಅನುಶಾಸನಗಳು/ಸುಗ್ರೀವಾಜ್ಞೆಗಳಲ್ಲಿ ವ್ಯಾಖ್ಯಾನಿಸಲಾದ ರೀತಿಯಲ್ಲಿ ಸಂಶೋಧನಾ ಸಲಹಾ ಸಮಿತಿ ಅಥವಾ ಅದಕ್ಕೆ ಸಮಾನವಾದ ಸಮಿತಿ ಇರಬೇಕು. ಸಂಬಂಧಪಟ್ಟ ಪಿಎಚ್.ಡಿ ವಿದ್ಯಾರ್ಥಿಯ ಸಂಶೋಧನಾ ಮಾರ್ಗದರ್ಶಕರು ಈ ಸಮಿತಿಯ ಸಂಚಾಲಕರಾಗಿರಬೇಕು.

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ | ಸ್ಥಾನ |
|---|---|---|
| 1. | ಡೀನ್, ಸಂಬಂಧಿಸಿದ ನಿಕಾಯ | ಅಧ್ಯಕ್ಷರು |
| 2. | ಅಧ್ಯಕ್ಷರು, ಅಧ್ಯಯನ ಮಂಡಳಿ / ಮುಖ್ಯಸ್ಥರು, ಅಧ್ಯಯನ ವಿಭಾಗ | ಸದಸ್ಯರು |
| 3. | ಒಬ್ಬ ವಿಷಯ ತಜ್ಞರು (ವಿಶ್ವವಿದ್ಯಾಲಯದ ಒಳಗೆ ಅಥವಾ ಹೊರಗಿನಿಂದ) | ಸದಸ್ಯರು |
| 4. | ಮಾನ್ಯತೆ ಪಡೆದ ವಿಭಾಗದ ಇತರ ಮಾರ್ಗದರ್ಶಕರು / ಸಹ ಮಾರ್ಗದರ್ಶಕರು | ಸದಸ್ಯರು |
| 5 | ಸಂಶೋಧನಾ ಮಾರ್ಗದರ್ಶಕರು | ಸಂಚಾಲಕರು |

ಅಥವಾ

ವಿಶ್ವವಿದ್ಯಾಲಯದ ಪ್ರತಿಯೊಂದು ಅಧ್ಯಯನ ವಿಭಾಗ/ವಿಸ್ತರಣಾ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳಿಗೆ ಸಂಶೋಧನಾ ಸಲಹಾ ಸಮಿತಿ ಇರುತ್ತದೆ. ಸಂಶೋಧನಾ ಸಲಹಾ ಸಮಿತಿ ರಚನೆಯು ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ | ಸ್ಥಾನ |
|---|---|---|
| 1. | ಡೀನ್, ಸಂಬಂಧಿಸಿದ ನಿಕಾಯ | ಅಧ್ಯಕ್ಷರು |
| 2. | ಅಧ್ಯಕ್ಷರು, ಅಧ್ಯಯನ ಮಂಡಳಿ | ಸದಸ್ಯರು |
| 3. | ಒಬ್ಬ ವಿಷಯ ತಜ್ಞರು (ವಿಶ್ವವಿದ್ಯಾಲಯದ ಒಳಗೆ ಅಥವಾ ಹೊರಗಿನಿಂದ) | ಸದಸ್ಯರು |
| 4. | ಮಾನ್ಯತೆ ಪಡೆದ ವಿಭಾಗದ ಇತರ ಮಾರ್ಗದರ್ಶಕರು / ಸಹ ಮಾರ್ಗದರ್ಶಕರು | ಸದಸ್ಯರು |
| 5 | ಆಯಾ ವಿಭಾಗದ ಮುಖ್ಯಸ್ಥರು | ಸದಸ್ಯ ಸಂಚಾಲಕರು |

ಮೇಲಿನ ಸಮಿತಿ ರಚನೆಯಲ್ಲಿ ಕುಲಪತಿಗಳ ನಿರ್ಧಾರವೇ ಅಂತಿಮವಾಗಿರುತ್ತದೆ.

2/4/25



Scanned with OKEN Scanner

ಈ ಸಮಿತಿಯು ಈ ಕೆಳಗಿನ ಜವಾಬ್ದಾರಿಗಳನ್ನು ಹೊಂದಿರುತ್ತದೆ:

೧. ಸಂಶೋಧನಾ ಪ್ರಸ್ತಾವನೆಯನ್ನು ಪರಿಶೀಲಿಸುವುದು ಮತ್ತು ಸಂಶೋಧನೆಯ ವಿಷಯವನ್ನು ಅಂತಿಮಗೊಳಿಸುವುದು.

೨. ಪಿಎಚ್.ಡಿ ವಿದ್ಯಾರ್ಥಿಗಳಿಗೆ ಅಧ್ಯಯನ ವಿನ್ಯಾಸ ಮತ್ತು ಸಂಶೋಧನಾ ವಿಧಾನವನ್ನು ಅಭಿವೃದ್ಧಿಪಡಿಸುವಲ್ಲಿ ಮಾರ್ಗದರ್ಶನ ನೀಡುವುದು ಮತ್ತು ಅವರು ಮಾಡಬೇಕಾದ ಕೋರ್ಸ್(ಗಳನ್ನು) ಗುರುತಿಸುವುದು.

೩. ಪಿಎಚ್.ಡಿ ವಿದ್ಯಾರ್ಥಿ ಸಂಶೋಧನಾ ಕಾರ್ಯದ ಪ್ರಗತಿಯನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು ಮತ್ತು ಸಲಹೆ, ಸೂಚನೆಗಳನ್ನು ನೀಡುವುದು.

(೨). ಪ್ರತಿ ಅವಧಿಯಲ್ಲಿ/ಸೆಮಿಸ್ಟರ್‌ನಲ್ಲಿ, ಪಿಎಚ್.ಡಿ ವಿದ್ಯಾರ್ಥಿ ಸಂಶೋಧನಾ ಸಲಹಾ ಸಮಿತಿಯ ಮುಂದೆ ಹಾಜರಾಗಿ ಅಧ್ಯಯನದ ಪ್ರಗತಿ ವರದಿಯನ್ನು ಪರಿಶೀಲನೆಗಾಗಿ ಮಂಡನೆ ಮಾಡಬೇಕು ಮತ್ತು ಪ್ರಗತಿ ವರದಿಯನ್ನು ಲಿಖಿತವಾಗಿ ಸಲ್ಲಿಸಬೇಕು. ಸಂಶೋಧನಾ ಸಲಹಾ ಸಮಿತಿಯು ಪಿಎಚ್‌ಡಿ ವಿದ್ಯಾರ್ಥಿಯ ಪ್ರಗತಿ ವರದಿಯ ಪ್ರತಿಯೊಂದಿಗೆ ತನ್ನ ಶಿಫಾರಸುಗಳನ್ನು ಅಧ್ಯಯನಾಂಗಕ್ಕೆ ಸಲ್ಲಿಸಬೇಕು. ಅಂತಹ ಶಿಫಾರಸುಗಳ ಒಂದು ಪ್ರತಿಯನ್ನು ಪಿಎಚ್.ಡಿ ವಿದ್ಯಾರ್ಥಿಗೂ ಸಹ ಒದಗಿಸಬೇಕು.

(೩). ಪಿಎಚ್.ಡಿ ವಿದ್ಯಾರ್ಥಿಯ ಪ್ರಗತಿ ತೃಪ್ತಿಕರವಾಗಿಲ್ಲದಿದ್ದರೆ, ಸಂಶೋಧನಾ ಸಲಹಾ ಸಮಿತಿಯು ಅದರ ಕಾರಣಗಳನ್ನು ದಾಖಲಿಸಬೇಕು ಮತ್ತು ಸರಿಪಡಿಸುವ ಕ್ರಮಗಳನ್ನು ಸೂಚಿಸಬೇಕು. ಪಿಎಚ್.ಡಿ ವಿದ್ಯಾರ್ಥಿಯು ಈ ಸರಿಪಡಿಸುವ ಕ್ರಮಗಳನ್ನು ಅಳವಡಿಸಿಕೊಳ್ಳಲು ವಿಫಲವಾದರೆ, ಸಂಶೋಧನಾ ಸಲಹಾ ಸಮಿತಿಯು ನಿರ್ದಿಷ್ಟ ಕಾರಣಗಳೊಂದಿಗೆ ಪಿಎಚ್.ಡಿ ಕಾರ್ಯಕ್ರಮದಿಂದ ಪಿಎಚ್.ಡಿ ವಿದ್ಯಾರ್ಥಿಯ ನೋಂದಣಿಯನ್ನು ರದ್ದುಗೊಳಿಸಲು ಶಿಫಾರಸು ಮಾಡಬಹುದು.

೧೧. ಮೌಲ್ಯಮಾಪನ ಮತ್ತು ಅದರ ವಿಧಾನಗಳು, ಪದವಿ ಪ್ರದಾನಕ್ಕಿರುವ ಕನಿಷ್ಠ ಕ್ರೆಡಿಟ್/ಮಾನದಂಡಗಳು ಇತ್ಯಾದಿ:

(೧). ಕೋರ್ಸ್‌ವರ್ಕ್‌ನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ನಂತರ ಮತ್ತು ಮೇಲಿನ ನಿಯಮ ೯ರ ಷರತ್ತು (೩) ರಲ್ಲಿ ಸೂಚಿಸಲಾದ ಅಂಕಗಳು/ಗ್ರೇಡ್ ಅನ್ನು ಪಡೆದ ನಂತರ, ಪಿಎಚ್.ಡಿ ವಿದ್ಯಾರ್ಥಿ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಮತ್ತು ಕರಡು ಮಹಾಪ್ರಬಂಧ/ನಿಬಂಧವನ್ನು ರಚಿಸಲು ಅವಕಾಶವಿರುತ್ತದೆ.

(೨). ಪಿಎಚ್.ಡಿ. ಪ್ರಬಂಧವನ್ನು ಸಲ್ಲಿಸುವ ಪೂರ್ವದಲ್ಲಿ ಪಿಎಚ್.ಡಿ ವಿದ್ಯಾರ್ಥಿ ವಿಭಾಗಗಳ / ವಿಸ್ತರಣಾ ಕೇಂದ್ರಗಳ ಮತ್ತು ಸಂಶೋಧನಾ ಕೇಂದ್ರಗಳ ಸಂಶೋಧನಾ ಸಲಹಾ ಸಮಿತಿಯ ಮುಂದೆ ಕರಡು ಪ್ರಬಂಧವನ್ನು ಮಂಡನೆ ಮಾಡಬೇಕು, ಈ ಸಭೆಗೆ ಎಲ್ಲಾ ಅಧ್ಯಾಪಕ ಸದಸ್ಯರಿಗೆ ಮತ್ತು ಇತರ ಸಂಶೋಧನಾ ವಿದ್ಯಾರ್ಥಿಗಳಿಗೆ ಮುಕ್ತ ಅವಕಾಶವಿರುತ್ತದೆ. ಸಭೆಯ ಪ್ರತಿಕ್ರಿಯೆ ಮತ್ತು ಅಭಿಪ್ರಾಯಗಳನ್ನು ಸಂಶೋಧನಾ ಸಲಹಾ ಸಮಿತಿಯೊಂದಿಗೆ ವಿದ್ಯಾರ್ಥಿ ಸಮಾಲೋಚಿಸಿ ಮಹಾಪ್ರಬಂಧದಲ್ಲಿ ಅಳವಡಿಸಿಕೊಳ್ಳಬೇಕು.

(೩). ವಿಶ್ವವಿದ್ಯಾನಿಲಯವು ಸಂಶೋಧನಾ ಕಾರ್ಯದಲ್ಲಿ ಆಗುವ ಕೃತಿಚೌರ್ಯವನ್ನು ಪತ್ತೆಹಚ್ಚಲು ಉತ್ತಮವಾಗಿ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ತಂತ್ರಾಂಶಗಳನ್ನು ಮತ್ತು ಸಾಂಸ್ಥಿಕ ಕಾರ್ಯವಿಧಾನವನ್ನು ಹೊಂದಿರಬೇಕು ಹಾಗೂ ಪಿಎಚ್.ಡಿ ಪದವಿಯ ಭಾಗವಾಗಿರುವ ಎಲ್ಲಾ ಸಂಶೋಧನಾ ಚಟುವಟಿಕೆಗಳು ಸಂಶೋಧನಾ ಸಮಗ್ರತೆಯು ಅಂಗವಾಗಿರಬೇಕು.

2/4/25



Scanned with OKEN Scanner

(೪). ಪಿಎಚ್.ಡಿ ವಿದ್ಯಾರ್ಥಿಗಳು ಮೌಲ್ಯಮಾಪನಕ್ಕಾಗಿ ಮಹಾಪ್ರಬಂಧದ ಎಂಟು (೮) ಪ್ರತಿಗಳನ್ನು ಮತ್ತು ಸಾರಲೇಖದ ಹತ್ತು (೧೦) ಪ್ರತಿಗಳನ್ನು ಸಲ್ಲಿಸಬೇಕು, ಜೊತೆಗೆ (ಎ) ಪಿಎಚ್.ಡಿ ವಿದ್ಯಾರ್ಥಿಗಳಿಂದ ಯಾವುದೇ ಕೃತಿಚೌರ್ಯ ಆಗಿಲ್ಲ ಎಂದು ದೃಢೀಕರಣ ಪತ್ರ ಮತ್ತು (ಬಿ) ಮಹಾಪ್ರಬಂಧದ ಸ್ವಂತಿಕೆಯನ್ನು ದೃಢೀಕರಿಸುವ ಮತ್ತು ಯಾವುದೇ ಇತರ ವಿಶ್ವವಿದ್ಯಾಲಯಕ್ಕೆ ಯಾವುದೇ ಪದವಿ/ಡಿಪ್ಲೊಮಾ ನೀಡಲು ಪ್ರಬಂಧವನ್ನು ಸಲ್ಲಿಸಲಾಗಿಲ್ಲ ಎಂಬ ಸಂಶೋಧನಾ ಮಾರ್ಗದರ್ಶಕರ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

(೫). ಪಿಎಚ್‌ಡಿ ವಿದ್ಯಾರ್ಥಿ ಸಲ್ಲಿಸುವ ಪಿಎಚ್.ಡಿ ಪ್ರಬಂಧವನ್ನು ಅವರ ಸಂಶೋಧನಾ ಮಾರ್ಗದರ್ಶಕರಿಂದ ಮೌಲ್ಯಮಾಪನ ಮಾಡಿಸುವುದು ಮತ್ತು ಸಂಬಂಧಪಟ್ಟ ಉನ್ನತ ಶಿಕ್ಷಣ ಸಂಸ್ಥೆಯ ಉದ್ಯೋಗಿ ಮಾತ್ರವಾಗಿರದೆ ಆ ಕ್ಷೇತ್ರದಲ್ಲಿ ಪರಿಣಿತರಾಗಿರುವ ಕನಿಷ್ಠ ಇಬ್ಬರು ಬಾಹ್ಯ ಮೌಲ್ಯಮಾಪಕರು ಮತ್ತು ಅಂತಹ ಮೌಲ್ಯಮಾಪಕರು ಆ ಕ್ಷೇತ್ರದಲ್ಲಿ ವಿದ್ವತ್ಪೂರ್ಣ ಪ್ರಕಟಣೆಗಳ ಉತ್ತಮ ದಾಖಲೆಯನ್ನು ಹೊಂದಿರುವ ವಿಷಯ ತಜ್ಞರಾಗಿರಬೇಕು. ಸಾಧ್ಯವಾದರೆ ಬಾಹ್ಯ ಮೌಲ್ಯಮಾಪಕರಲ್ಲಿ ಒಬ್ಬರನ್ನು ಭಾರತದ ಹೊರಗಿನಿಂದ ಆಯ್ಕೆ ಮಾಡಬೇಕು. ಮೌಖಿಕ ಪರೀಕ್ಷೆ ಮಂಡಳಿಯಲ್ಲಿ ಸಂಶೋಧನಾ ಮಾರ್ಗದರ್ಶಕರು ಮತ್ತು ಇಬ್ಬರು ಬಾಹ್ಯ ಮೌಲ್ಯಮಾಪಕರಲ್ಲಿ ಕನಿಷ್ಠ ಒಬ್ಬರನ್ನು ಒಳಗೊಂಡಿರಬೇಕು ಮತ್ತು ಅನುಮತಿ ಪಡೆದು ಆನ್‌ಲೈನ್‌ನಲ್ಲಿಯೂ ನಡೆಸಬಹುದು. ಮೌಖಿಕ ಪರೀಕ್ಷೆಯಲ್ಲಿ ಸಂಶೋಧನಾ ಸಲಹಾ ಸಮಿತಿಯ ಸದಸ್ಯರು ಇರುತ್ತಾರೆ. ಮೌಖಿಕ ಪರೀಕ್ಷೆಯು ಬೋಧಕವರ್ಗದ ಸದಸ್ಯರಿಗೆ/ ಸಂಶೋಧನಾ ವಿದ್ಯಾರ್ಥಿಗಳಿಗೆ ಮುಕ್ತವಾಗಿರುತ್ತದೆ.

(೬). ಬಾಹ್ಯ ಮೌಲ್ಯಮಾಪಕರಿಬ್ಬರೂ ಪಿಎಚ್.ಡಿ ಮಹಾಪ್ರಬಂಧವು ಪದವಿಗೆ ಅರ್ಹವಾಗಿದೆ ಎಂದು ಶಿಫಾರಸು ಮಾಡಿದರೆ, ಅವರು ಸೂಚಿಸಿದ ಯಾವುದೇ ತಿದ್ದುಪಡಿಗಳನ್ನು ಸೇರಿಸಿದ ನಂತರ ಪಿಎಚ್.ಡಿ ವಿದ್ಯಾರ್ಥಿಗೆ ಪ್ರಬಂಧವನ್ನು ಸಮರ್ಥಿಸಿಕೊಳ್ಳಲು ಮೌಖಿಕ ಪರೀಕ್ಷೆಯನ್ನು ನಡೆಸಲಾಗುತ್ತದೆ. ಬಾಹ್ಯ ಮೌಲ್ಯಮಾಪಕರಲ್ಲಿ ಒಬ್ಬರು ನಿರಾಕರಣೆಗೆ ಶಿಫಾರಸು ಮಾಡಿದರೆ, ಅಧ್ಯಯನಾಂಗವು ಅನುಮೋದಿತ ಮೌಲ್ಯಮಾಪಕರ ಪಟ್ಟಿಯಲ್ಲಿ ಪರ್ಯಾಯ ಬಾಹ್ಯ ಮೌಲ್ಯಮಾಪಕರೊಬ್ಬರಿಗೆ ಮಹಾಪ್ರಬಂಧವನ್ನು ಕಳುಹಿಸಬೇಕು. ಆ ಪರ್ಯಾಯ ಮೌಲ್ಯಮಾಪಕರು ಮಹಾಪ್ರಬಂಧವನ್ನು ಪದವಿಗೆ ಅರ್ಹವಾಗಿದೆ ಎಂದು ಶಿಫಾರಸು ಮಾಡಿದರೆ ಮಾತ್ರ ಮೌಖಿಕ ಪರೀಕ್ಷೆಯನ್ನು ನಡೆಸಬೇಕು. ಪರ್ಯಾಯ ಮೌಲ್ಯಮಾಪಕರು ಮಹಾ ಪ್ರಬಂಧವನ್ನು ಪಿಎಚ್.ಡಿ ಪದವಿಗೆ ಅನರ್ಹವೆಂದು ಶಿಫಾರಸು ಮಾಡಿದ್ದರೆ ಮಹಾಪ್ರಬಂಧವನ್ನು ತಿರಸ್ಕರಿಸಿ ಪಿಎಚ್‌ಡಿ ಪದವಿಗೆ ಅನರ್ಹವೆಂದು ಘೋಷಿಸಬೇಕು.

(೭). ವಿಶ್ವವಿದ್ಯಾಲಯದ ಅಧ್ಯಯನಾಂಗವು ಮಹಾಪ್ರಬಂಧವನ್ನು ಸಲ್ಲಿಸಿದ ದಿನಾಂಕದಿಂದ ಆರು (೬) ತಿಂಗಳ ಅವಧಿಯೊಳಗೆ, ಮಹಾಪ್ರಬಂಧದ ಫಲಿತಾಂಶದ ಘೋಷಣೆ ಸೇರಿದಂತೆ, ಪಿಎಚ್.ಡಿ ಮಹಾಪ್ರಬಂಧದ ಮೌಲ್ಯಮಾಪನದ ಪೂರ್ಣ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಬೇಕು.

**೧೨. ಪಿಎಚ್.ಡಿ ಪದವಿ ಕಾರ್ಯಕ್ರಮಗಳಿಗೆ ಮಾನ್ಯತೆ ಪಡೆಯಲು ಕಾಲೇಜುಗಳು/ಸಂಶೋಧನಾ ಕೇಂದ್ರಗಳು ಪೂರೈಸಬೇಕಾದ ಶೈಕ್ಷಣಿಕ, ಸಂಶೋಧನಾತ್ಮಕ, ಆಡಳಿತಾತ್ಮಕ ಮತ್ತು ಮೂಲಸೌಕರ್ಯದ ಅವಶ್ಯಕತೆಗಳು:**

(೧). ಸ್ನಾತಕೋತ್ತರ ಕಾಲೇಜುಗಳು ೪ ವರ್ಷಗಳ ಪದವಿ ಕಾರ್ಯಕ್ರಮಗಳು ಅಥವಾ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನೀಡುತ್ತಿದ್ದರೆ, ಈ ನಿಯಮಗಳ ಅನುಸಾರ ಅರ್ಹ ಸಂಶೋಧನಾ ಮಾರ್ಗದರ್ಶಕರ ಲಭ್ಯವಿದ್ದರೆ, ಅಗತ್ಯವಿರುವ ಮೂಲಸೌಕರ್ಯ ಮತ್ತು ಆಡಳಿತಾತ್ಮಕ ಹಾಗೂ ಸಂಶೋಧನಾ ಸೌಲಭ್ಯಗಳನ್ನು ಹೊಂದಿದ್ದರೆ ಪಿಎಚ್.ಡಿ ಕಾರ್ಯಕ್ರಮ ನಡೆಸಲು ಮಾನ್ಯತೆಯನ್ನು ಪಡೆಯಬಹುದು.



Scanned with OKEN Scanner

(೨). ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಕಾಲೇಜುಗಳು ಮತ್ತು ಸಂಶೋಧನಾ ಕೇಂದ್ರಗಳಲ್ಲಿ ವಿಶ್ವವಿದ್ಯಾಲಯದಿಂದ ಪದವಿಗಳನ್ನು ನೀಡುತ್ತಿದ್ದರೆ, ಅವುಗಳಿಗೆ ಪಿಎಚ್.ಡಿ ಕಾರ್ಯಕ್ರಮಗಳಿಗೆ ಮಾನ್ಯತೆ ನೀಡಲು ಅವಕಾಶವಿದೆ. ಅವುಗಳು ಈ ಕೆಳಗಿನ ಮಾನದಂಡಗಳನ್ನು ಹೊಂದಿರಬೇಕು;

೧. ಕಾಲೇಜಿನಲ್ಲಿ ಅರ್ಹತೆ ಇರುವ ಕನಿಷ್ಠ ಇಬ್ಬರು ಅಧ್ಯಾಪಕರು ಅಥವಾ ಸಂಶೋಧನಾ ಕೇಂದ್ರಗಳಲ್ಲಿ ಪಿಎಚ್.ಡಿ ಅರ್ಹತೆ ಹೊಂದಿರುವ ಇಬ್ಬರು ವಿಜ್ಞಾನಿಗಳು ಇರಬೇಕು.

೨. ವಿಶ್ವವಿದ್ಯಾಲಯವು ನಿರ್ದಿಷ್ಟಪಡಿಸಿದಂತೆ ಮೂಲಸೌಕರ್ಯ, ಆಡಳಿತಾತ್ಮಕ ವ್ಯವಸ್ಥೆ, ಸಂಶೋಧನಾ ಸೌಲಭ್ಯಗಳು ಮತ್ತು ಗ್ರಂಥಾಲಯ ಸಂಪನ್ಮೂಲಗಳನ್ನು ಹೊಂದಿರಬೇಕು.

**೧೩. ಅರೆಕಾಲಿಕ ವಿಧಾನ ಮೂಲಕ ಪಿಎಚ್‌ಡಿ ಅಧ್ಯಯನ:**

(೧). ಈ ನಿಯಮಗಳಲ್ಲಿ ನಿಗದಿಪಡಿಸಿದ ಎಲ್ಲಾ ಷರತ್ತುಗಳನ್ನು ಪೂರೈಸಿದರೆ, ಅರೆಕಾಲಿಕ ವಿಧಾನದ ಮೂಲಕ ಪಿಎಚ್.ಡಿ ಅಧ್ಯಯನ ಮಾಡಲು ಅನುಮತಿಸಬೇಕು.

(೨). ಅಭ್ಯರ್ಥಿಯು ಉದ್ಯೋಗ ಮಾಡುವ ಸಂಸ್ಥೆಯ ಸೂಕ್ತ ಪ್ರಾಧಿಕಾರದಿಂದ ಅರೆಕಾಲಿಕ ಪಿಎಚ್.ಡಿ ಕಾರ್ಯಕ್ರಮವನ್ನು ಅಧ್ಯಯನ ಮಾಡಲು ಆಕ್ಷೇಪಣೆಯಿಲ್ಲ ಎಂಬ "ನಿರಾಕ್ಷೇಪಣೆ ಪ್ರಮಾಣಪತ್ರ"ವನ್ನು ಪಡೆಯಬೇಕು, ಅದನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಅದರಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕಾದ ವಿವರ ಹೀಗಿದೆ;

೧. ಅಭ್ಯರ್ಥಿಯು ಅರೆಕಾಲಿಕ ಆಧಾರದ ಮೇಲೆ ಪಿಎಚ್.ಡಿ ಅಧ್ಯಯನವನ್ನು ನಡೆಸಲು ಅನುಮತಿಯಿದೆ.

೨. ಅಭ್ಯರ್ಥಿಯು ಅಧಿಕೃತ ಕರ್ತವ್ಯಗಳ ಜೊತೆಗೆ ಅಭ್ಯರ್ಥಿಯ ಸಂಶೋಧನೆಗಾಗಿ ಸಾಕಷ್ಟು ಸಮಯವನ್ನು ವಿನಿಯೋಗಿಸಲು ಅನುವು ಮಾಡಿಕೊಡುತ್ತದೆ.

೩. ಅಗತ್ಯವಿದ್ದ ಸಂದರ್ಭದಲ್ಲಿ ಕೋರ್ಸ್‌ವರ್ಕ್ ಪೂರ್ಣಗೊಳಿಸುವ ಅವಧಿಯಲ್ಲಿ ಕರ್ತವ್ಯದಿಂದ ಅಭ್ಯರ್ಥಿಯನ್ನು ಬಿಡುಗಡೆ ಮಾಡಲಾಗುತ್ತದೆ.

(೩). ಈ ನಿಯಮಗಳು ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸದ್ಯಕ್ಕೆ ಜಾರಿಯಲ್ಲಿರುವಂತೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ವಿಶ್ವವಿದ್ಯಾಲಯ; ಸಂಸ್ಥೆ ಅಥವಾ ಸಂಶೋಧನಾ ಸಂಸ್ಥೆಗಳಿಂದ ದೂರಶಿಕ್ಷಣ ಅಥವಾ ಆನ್‌ಲೈನ್ ವಿಧಾನದ ಮೂಲಕ ಪಿಎಚ್.ಡಿ ಕಾರ್ಯಕ್ರಮಗಳನ್ನು ನಡೆಸುವಂತಿಲ್ಲ.

**೧೪. ಎಂ.ಫಿಲ್. ಪದವಿಯ ನೀಡುವುದು:–** ವಿಶ್ವವಿದ್ಯಾಲಯವು ಎಂ.ಫಿಲ್. (ಮಾಸ್ಟರ್ ಆಫ್ ಫಿಲಾಸಫಿ) ಕಾರ್ಯಕ್ರಮವನ್ನು ನಡೆಸುವಂತಿಲ್ಲ.

**೧೫. ತಾತ್ಕಾಲಿಕ ಪ್ರಮಾಣಪತ್ರವನ್ನು ನೀಡುವುದು:**

ಪಿಎಚ್.ಡಿ ಪದವಿ ಪ್ರಮಾಣ ಪತ್ರವನ್ನು ನೀಡುವ ಮೊದಲು, ಪದವಿ ನೀಡುವ ವಿಶ್ವವಿದ್ಯಾಲಯವು ಈ ನಿಯಮಗಳಿಗೆ ಅನುಸಾರವಾಗಿ ಪಿಎಚ್.ಡಿ. ನೀಡಲಾಗುತ್ತಿದೆ ಎಂದು ತಾತ್ಕಾಲಿಕ ಪ್ರಮಾಣಪತ್ರವನ್ನು ನೀಡಬೇಕು.

**೧೬. ಈ ನಿಯಮಗಳ ಅಧಿಸೂಚನೆಗೆ ಪೂರ್ವದ ಪಿಎಚ್‌ಡಿ ಪದವಿಗಳ ಪ್ರದಾನ:**

2/4/25



Scanned with OKEN Scanner

ಜುಲೈ ೧೧, ೨೦೦೯ ರಂದು ಅಥವಾ ನಂತರ ಈ ನಿಯಮಗಳ ಅಧಿಸೂಚನೆಯ ದಿನಾಂಕದವರೆಗೆ ಪಿಎಚ್.ಡಿ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ಪದವಿಗಳನ್ನು ನೀಡುವುದನ್ನು ಯುಜಿಸಿ (ಎಂ.ಫಿಲ್./ಪಿಎಚ್‌ಡಿ ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳ), ನಿಯಮಗಳು – ೨೦೦೯ ಅಥವಾ ಯುಜಿಸಿ (ಎಂ.ಫಿಲ್./ಪಿಎಚ್‌ಡಿ ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳ) ನಿಯಮಗಳು – ೨೦೧೬ರ ನಿಯಮಗಳಿಂದ ನಿರ್ಬಂಧಿಸುತ್ತದೆ. ಇದಲ್ಲದೆ, ಈಗಾಗಲೇ ನೋಂದಾಯಿತ ಮತ್ತು ಪಿಎಚ್.ಡಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಪದವಿಗಳ ಪ್ರದಾನವನ್ನು ಈ ನಿಯಮಗಳು ಅಥವಾ ಯುಜಿಸಿ (ಎಂ.ಫಿಲ್./ಪಿಎಚ್‌ಡಿ ಪದವಿಯ ಕನಿಷ್ಠ ಗುಣಮಟ್ಟ ಮತ್ತು ಪ್ರಕ್ರಿಯೆಗಳ) ನಿಯಮಗಳು – ೨೦೧೬ರ ಅನುಸಾರ ಮಾಡಲಾಗುತ್ತದೆ. ಈ ನಿಯಮಗಳ ಜಾರಿಗೆ ಮುನ್ನ ಪ್ರಾರಂಭವಾಗಿರುವ ಎಂ.ಫಿಲ್. ಪದವಿ ಕಾರ್ಯಕ್ರಮಗಳ ಮೇಲೆ ಈ ನಿಯಮಗಳಲ್ಲಿರುವ ಯಾವುದೇ ಅಂಶಗಳು ಪರಿಣಾಮ ಬೀರುವಂತಿಲ್ಲ.

೧೭. **INFLIBNETಗೆ ಪಿಎಚ್.ಡಿ ಮಹಾಪ್ರಬಂಧವನ್ನು ದತ್ತಾಂಶವಾಗಿ ಸಲ್ಲಿಸುವುದು** – ಪಿಎಚ್.ಡಿ ಮಹಾ ಪ್ರಬಂಧದ ಮೌಲ್ಯಮಾಪನ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಮತ್ತು ಪಿಎಚ್.ಡಿ ಪದವಿ(ಗಳು)ಯ ಘೋಷಣೆಗೆ ಮೊದಲು, ಸಂಬಂಧಪಟ್ಟ ಉನ್ನತ ಶಿಕ್ಷಣ ಸಂಸ್ಥೆಯು ಪಿಎಚ್.ಡಿ ಪ್ರಬಂಧದ ಎಲೆಕ್ಟ್ರಾನಿಕ್ ಪ್ರತಿಯನ್ನು INFLIBNETಗೆ ಸಲ್ಲಿಸಬೇಕು, ಇದರಿಂದಾಗಿ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಅದರ ಪ್ರತಿಯನ್ನು ಲಭ್ಯವಾಗುವಂತೆ ಮಾಡುವುದು.

೧೮. **ಶುಲ್ಕ ವಿವರ:** ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರವು ಕಾಲಕಾಲಕ್ಕೆ ನಿಗದಿಪಡಿಸುವಂತಹ ಶುಲ್ಕವನ್ನು ವಿದ್ಯಾರ್ಥಿಗಳು ಅನುಸರಿಸುವುದು.

೧೯. **ಇತರೆ:** ಈ ನಿಯಮದಲ್ಲಿ ವಿವರಿಸಿದ ಅಂಶಗಳಿಗೆ ಅಗತ್ಯವಾದ ಅರ್ಜಿ ಹಾಗೂ ಇತರ ವಿವರಣೆಗಳ ಪಟ್ಟಿಯನ್ನು ಅನುಬಂಧ ಭಾಗದಲ್ಲಿ ನೀಡಲಾಗಿದೆ.

೨೦. **ತೊಂದರೆಗಳ ನಿವಾರಣೆ:**

ಈ ನಿಯಮಗಳನ್ನು ಅನುಷ್ಠಾನಗೊಳಿಸುವಾಗ ಯಾವುದೇ ತೊಂದರೆ ಉಂಟಾದರೆ, ಕುಲಪತಿಗಳು ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ತೊಂದರೆಗಳನ್ನು ನಿವಾರಿಸಿಕೊಳ್ಳಲು ಡೀನ್‌ರು / ಪ್ರವೇಶಾತಿ ಸಮಿತಿಯೊಂದಿಗೆ ಸಮಾಲೋಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದು.

೨೧. **ರದ್ದತಿ (ಹಿಂತೆಗೆದುಕೊಳ್ಳುವುವಿಕೆ) ಮತ್ತು ಉಳಿಸಿಕೊಳ್ಳುವುದು:**

ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಯ ೨೦೧೦ ಮತ್ತು ೨೦೧೬ರ ನಿಯಮಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ. ಆದಾಗ್ಯೂ, ಹಿಂದೆ ಪ್ರವೇಶ ಪಡೆದ ಅಭ್ಯರ್ಥಿಗಳು ಅಂದಿನ ನಿಯಮಗಳಿಗೆ ಒಳಪಡುತ್ತಾರೆ.

**ಪಿಎಚ್.ಡಿ. ನಿಯಮ ರಚನೆ ಮಾಡಿದ ಕರಡು ಸಮಿತಿ ಸದಸ್ಯರ ಹೆಸರು, ಪದನಾಮ ಮತ್ತು ಸಹಿ, ದಿನಾಂಕ**

| | | |
|---|---|---|
| ೧. | **ಡಾ. ಶಿವಾನಂದ ಎಸ್ ವಿರಕ್ತಮಠ**<br>ಡೀನ್, ಲಲಿತಕಲಾ ನಿಕಾಯ | ಅಧ್ಯಕ್ಷರು |
| ೨. | **ಡಾ. ಕೆ. ಮೋಹನ್‌ಕೃಷ್ಣ ರೈ**<br>ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| ೩. | **ಡಾ.ಪಿ. ಮಹಾದೇವಯ್ಯ**<br>ಹಿರಿಯ ಪ್ರಾಧ್ಯಾಪಕರು | ಸದಸ್ಯರು |



Scanned with OKEN Scanner

| | | | |
|---|---|---|---|
| ೪. | **ಡಾ. ಅಶೋಕ ಕುಮಾರ ರಂಜೇರೆ**<br>ಹಿರಿಯ ಪ್ರಾಧ್ಯಾಪಕರು | ಸದಸ್ಯರು | 02/04/25 |
| ೫. | **ಡಾ. ಎ. ಶ್ರೀಧರ**<br>ಪ್ರಾಧ್ಯಾಪಕರು | ಸದಸ್ಯರು | |
| ೬. | **ಡಾ. ವೆಂಕಟಗಿರಿ ದಳವಾಯಿ**<br>ಪ್ರಾಧ್ಯಾಪಕರು | ಸದಸ್ಯರು | 2/4/25 |
| ೭. | **ಡಾ. ಅಮರೇಶ ಯತಗಲ್**<br>ನಿರ್ದೇಶಕರು, ಅಧ್ಯಯನಾಂಗ | ಸದಸ್ಯರು | 02.04.2025 |
| ೮. | **ಡಾ. ಯರ್ರಿಸ್ವಾಮಿ ಈ.**<br>ಸಹಾಯಕ ಪ್ರಾಧ್ಯಾಪಕರು (ಹಿರಿಯ ಶ್ರೇಣಿ) | ಸದಸ್ಯರು | 02/04/25 |
| ೯. | **ಶ್ರೀಮತಿ ಪ್ರಭಾ ಡಿ**<br>ಸಂಯೋಜನಾಧಿಕಾರಿಗಳು, ಯುಜಿಸಿ ಘಟಕ | ಸದಸ್ಯರು | 2/4/25 |
| ೧೦. | **ಡಾ. ಎಸ್ ವೈ ಸೋಮಶೇಖರ್**<br>ನಿರ್ದೇಶಕರು, ಶೈಕ್ಷಣಿಕ ವಿಭಾಗ | ಸದಸ್ಯ ಸಂಚಾಲಕರು | |



Scanned with OKEN Scanner